ರಾಜ್ಯದಲ್ಲಿ ಬಿ.ಪಿ.ಎಲ್. ಪಡಿತರ ಕಾರ್ಡ್ ನೀಡಿಕೆ

175 (548) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಕಳೆದ ಮೂರು ವರ್ಷಗಳಿಂದ ಅರ್ಹ ಫಲಾನುಭವಿಗಳಿಗೆ ನೀಡಲಾಗಿರುವ ಪಡಿತರ ಕಾರ್ಡುಗಳ ಒಟ್ಟು ಸಂಖ್ಯೆ ಎಷ್ಟು;

ಆ) ಅಕ್ರಮ ಹಾಗೂ ಅನರ್ಹರಿಗೆ ಹಂಚಿಕೆ ಮಾಡಲಾದ ರದ್ದತಿಗೆ ಸರ್ಕಾರದ ಕ್ರಮಗಳೇನು;

ಇ) ಬಿಪಿಎಲ್ ಕಾರ್ಡುಗಳಿಗೆ ವಿಧಿಸಲಾದ ನಿಯಮಗಳಲ್ಲಿ ಸರಳೀಕರಣಗೊಳಿಸಿ ಅರ್ಹ ಬಡ ಜನರಿಗೆ ಕಾರ್ಡುಗಳನ್ನು ನೀಡಲು ಸರ್ಕಾರ ತ್ವರಿತ ಕ್ರಮ ಕೈಗೊಳ್ಳಲಾಗುವುದೇ;

ಕು॥ ಶೋಭಾ ಕರಂದ್ಲಾಜೆ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸಚಿವರು):

ಅ) 2007–08ನೇ ಸಾಲಿನ ಅಂತ್ಯಕ್ಕೆ ಇರುವ ಪಡಿತರ ಚೀಟಿಗಳ ವಿವರ

ಅನ್ನಪೂರ್ಣ	ಎಎವೈ	ಬಿಪಿಎಲ್	ಎಪಿಎಲ್	ಒಟ್ಟು
22,277	11,99,549	59,21,281	50,87,498	1,23,30,605

3 ವರ್ಷಗಳ ಅವಧಿಯಲ್ಲಿ ವಿತರಿಸಲಾದ ಪಡಿತರ ಚೀಟಿಗಳ ವಿವರ (ಪ್ರಸ್ತುತ ಸಾಲು ಸೇರಿದಂತೆ)

ವರ್ಷ	ಎಎವೈ	ಬಿಪಿಎಲ್	ಎಪಿಎಲ್	ಒಟ್ಟು
2007–08	36,412	10,39,376	8,32,278	19,08,066
2008–09	317	28,82,734	4,32,962	33,16,013
2009–10	0	8,02,134	5,08,903	13,11,037
2010–11	0	44,875	52,651	97,526

ಆ) ಪ್ರಸ್ತುತ ರಾಜ್ಯಾದ್ಯಂತ ಅನರ್ಹ ಪಡಿತರ ಚೀಟಿದಾರರನ್ನು ಮತ್ತು ಪಡಿತರ ಚೀಟಿ ಪಡೆಯದೆ ಇರುವವರ ಗುರುತಿಸುವಿಕೆ ಕಾರ್ಯ ನಡೆಯುತ್ತಿದ್ದು, ಈ ಕಾರ್ಯವು ಮುಗಿದ ತಕ್ಷಣ ಅಕ್ರಮ ಹಾಗೂ ಅನರ್ಹರಿಗೆ ಹಂಚಿಕೆ ಮಾಡಲಾದ ಕಾರ್ಡುಗಳನ್ನು ರದ್ದುಗೊಳಿಸುವಂತೆ ಕ್ರಮ ಕೈಗೊಳ್ಳಲಾಗುವುದು.

ಇ) ಕೇಂದ್ರ ಸರ್ಕಾರದ ಪ್ರಕಾರ ರಾಜ್ಯದಲ್ಲಿ ಅಂದಾಜು 32 ಲಕ್ಷ ಬಿಪಿಎಲ್ ಕುಟುಂಬಗಳು ಇರಬೇಕು. ಆದರೆ ಈಗ ರಾಜ್ಯದಲ್ಲಿ ಒಟ್ಟು 98.4 ಲಕ್ಷ ಕುಟುಂಬಗಳನ್ನು ಬಿಪಿಎಲ್ ಎಂದು ವರ್ಗೀಕರಿಸಲಾಗಿದೆ. ಇದರಿಂದ ರಾಜ್ಯದ ನಿಯಮವು ಬಹಳ ಸರಳೀಕರಣಗೊಂಡಿದೆ ಎಂದು ತಿಳಿಯಬಹುದಾಗಿದೆ. ಇನ್ನೂ ಸರಳೀಕರಣಗೊಳಿಸಲು ಆಸ್ಪದ ಇರುವುದಿಲ್ಲ.

ಹಿಂದುಳಿದ ವರ್ಗಗಳ ಪ್ರಮಾಣ ಪತ್ರ ನೀಡಿಕೆಯಲ್ಲಿ ಆದಾಯಮಿತಿ ಹೆಚ್ಚಳ

176 (549) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ): ಮಾನ್ಯ ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದುಳಿದ ವರ್ಗಗಳಿಗೆ ನೀಡಲಾಗುತ್ತಿರುವ 2ಎ ಸರ್ಟಿಫಿಕೇಟ್‌ಗೆ ಆದಾಯ ಮಿತಿಯನ್ನು ಕೇಂದ್ರ ಸರ್ಕಾರದವರು ನಿಗದಿಪಡಿಸಿರುವಂತೆ ಹೆಚ್ಚಳ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಆ) ಆದಾಯ ಮಿತಿಯನ್ನು ಹೆಚ್ಚಳ ಮಾಡಲು ಹಿಂದುಳಿದ ವರ್ಗಗಳು ಕೋರಿಕೆ ಸಲ್ಲಿಸುತ್ತಿದ್ದರೂ ಆ ಕುರಿತು ಕ್ರಮ ಜರುಗಿಸುವಲ್ಲಿ ಸರ್ಕಾರದ ವಿಳಂಬಕ್ಕೆ ಕಾರಣಗಳೇನು;

ಇ) ಹಿಂದುಳಿದ ವರ್ಗಗಳ ನಾಗರಿಕರು ಮತ್ತು ಮಕ್ಕಳ ವಿದ್ಯಾಭ್ಯಾಸ, ಉದ್ಯೋಗ ಮುಂತಾದ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ಪಡೆಯಲು ಇರುವ ಅನಾನುಕೂಲತೆಗಳನ್ನು ಹೋಗಲಾಡಿಸಲು ಸರ್ಕಾರ ಕೂಡಲೇ ಆದಾಯ ಮಿತಿಯನ್ನು ಹೆಚ್ಚಿಸಲು ಸಕಾಲಿಕ ಕ್ರಮ ಜರುಗಿಸುವರೇ?

ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು):

ಅ) ಈ ಆದಾಯ ಮಿತಿಯನ್ನು ಹೆಚ್ಚಿಸುವ ಪ್ರಸ್ತಾವನೆ ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಹಜ್ ಯಾತ್ರಾರ್ಥಿಗಳು ಯಾತ್ರೆ ಸಂದರ್ಭದಲ್ಲಿ ತೊಂದರೆ ಅನುಭಸುತ್ತಿರುವುದು

179 (613) ಶ್ರೀ ಖಾದರ್ ಯು.ಟಿ. (ಮಂಗಳೂರು) ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರಿನಿಂದ ಕಳೆದ ವರ್ಷ ಹಜ್ ಯಾತ್ರೆಗೆ ಪ್ರಯಾಣ ಮಾಡಿದ ಯಾತ್ರಾರ್ಥಿಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)